ಪ್ರ.72
3

**ಪೊಲೀಸ್ ಗೋಲಿಬಾರ್‌ನಲ್ಲಿ ದಿನಾಂಕ:19.12.2019 ರಂದು ಮೃತಪಟ್ಟವರಿಗೆ ಸರ್ಕಾರದಿಂದ ಪರಿಹಾರ ನೀಡದೇ ಇರುವ ಬಗ್ಗೆ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರ ನಿಯಮ 72ಕ್ಕೆ ಗೃಹ ಸಚಿವರ ಉತ್ತರ**

ದಿನಾಂಕ 19-12-2019 ರಂದು ನಡೆದ ಗೋಲಿಬಾರ್ ಘಟನೆಗೆ ಸಂಬಂಧಿಸಿದಂತೆ ಮಂಗಳೂರು ಉತ್ತರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 133/2019 ಕಲಂ: 143, 147, 148, 188, 341, 427, 353, 332, 324, 307, 120[ಬಿ], ಜೊತೆಗೆ 149 ಐ.ಪಿ.ಸಿ ಹಾಗೂ ಕಲಂ 2[ಎ] ಮತ್ತು 2[ಬಿ] Karnataka Prevention Of Destruction And Loss Of Property Act-1981 ಮತ್ತು 174 ಸಿ.ಆರ್.ಪಿ.ಸಿ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಗೋಲಿಬಾರ್‌ನಲ್ಲಿ ಮೃತರಾದ (1) ಅಬ್ದುಲ್ ಜಲೀಲ್ @ ಅಬ್ದುಲ್ ಜಲೀಲ್ ಬಿನ್ ಮೊಹಮ್ಮದ್, 45 ವರ್ಷ, ವಾಸ ಗೋಲ್ಡನ್ ಪಾಯಿಂಟ್ ಅಪಾರ್ಟ್‌ಮೆಂಟ್, 2ನೇ ಮಹಡಿ, ಅಜೀಜುದ್ದೀನ್ ರಸ್ತೆ, ಬಂದರ್, ಮಂಗಳೂರು ಮತ್ತು (2) ನೌಶೀನ್ ಬಿನ್ ಇಬ್ರಾಹಿಂ, 24 ವರ್ಷ, ವಾಸ ಅಶೀಫ್ ಮನ್‌ಜಿಲ್, ಸಿಪಿಸಿ ಕಾಂಪೌಂಡ್, ಕುದ್ರೋಳಿ, ಮಂಗಳೂರು ರವರು ಸದರಿ ಪ್ರಕರಣದ ಪ್ರಥಮ ವರ್ತಮಾನ ವರದಿಯಲ್ಲಿ ಎ3, ಎ8 ಆರೋಪಿಗಳಾಗಿರುತ್ತಾರೆ. ಪ್ರಸ್ತುತ ಸದರಿ ಪ್ರಕರಣವನ್ನು ಸಿ.ಐ.ಡಿ ತನಿಖೆಗೆ ವರ್ಗಾಯಿಸಲಾಗಿದ್ದು, ತನಿಖೆಯಲ್ಲಿರುತ್ತದೆ.

ಗೋಲಿಬಾರ್‌ಗೆ ಸಂಬಂದಪಟ್ಟಂತೆ ಮ್ಯಾಜಿಸ್ಟೀರಿಯಲ್ ತನಿಖೆ ನಡೆಸಲು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಉಡುಪಿ ಜಿಲ್ಲೆ ಇವರನ್ನು ಕಾರ್ಯನಿರ್ವಾಹಕ ದಂಡಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ. ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಪ್ರಕರಣದಲ್ಲಿ ಮೃತರಾದ ಅಬ್ದುಲ್ ಜಲೀಲ್ @ ಅಬ್ದುಲ್ ಜಲೀಲ್ ಬಿನ್ ಮೊಹಮ್ಮದ್ ರವರು ಆರೋಪಿ ಎ3 ಹಾಗೂ ನೌಶೀನ್ ಬಿನ್ ಇಬ್ರಾಹಿಂ ರವರು ಆರೋಪಿ ಎ8 ಆಗಿರುತ್ತಾರೆ. ಇವರುಗಳಿಗೆ ಸರ್ಕಾರದಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ.

**ಹೆಚ್‌ಡಿ 66 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು